ಸಾಕ್ಷಿಯನ್ನು ದಿಃ **17.02.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 1 ರಿಂದ 3ರವರ ಪರ ಶ್ರೀ ಹೆಚ್.ಕೆ.ಎ.ವಕೀಲರಿಂದಃ-

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ವಾದಿ ಮಹದೇವಮ್ಮ ನನ್ನ ತಾಯಿಯಾಗಬೇಕು. ನನ್ನ ತಂದೆ ಬದುಕಿದ್ದಾರೆ. ನನ್ನ ತಂದೆಯನ್ನು ಈ ಅರ್ಜಿಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ಅವರನ್ನು ಪಕ್ಷಗಾರರನ್ನಾಗಿ ಮಾಡಲು ನನಗೇನೂ ತೊಂದರೆ ಇರಲಿಲ್ಲ. ದಾವಾ ಸ್ವತ್ತಿನ ಸರ್ವೆ ನಂಬರ ಮತ್ತು ಇತ್ಯಾದಿ ವಿವರಗಳು ನನಗೆ ತಿಳಿದಿವೆ. ನನ್ನ ತಾಯಿ ಕೂಡ ದಾವಾ ಸ್ವತ್ತುಗಳಲ್ಲಿ ವ್ಯವಸಾಯ ಮಾಡಿದ್ದಾರೆ. ಈಗ್ಗೆ 1997-98ರಲ್ಲೆ ಕೆಲವೊಂದು ದಾವಾ ಸ್ವತ್ತುಗಳ ಖಾತೆಯನ್ನು ನನ್ನ ಸೋದರಮಾವಂದಿರಾದ ಪ್ರತಿವಾದಿ 1 ರಿಂದ 4ರವರು ತಮ್ಮ ಹೆಸರಿಗೆ ಮಾಡಿಕೊಂಡಿದ್ದು, ಆ ಸಂದರ್ಭದಲ್ಲಿ ನನ್ನ ತಾಯಿ ಮೃತ ಮಹದೇವಮ್ಮ ಮತ್ತು ನನ್ನ ತಂದೆಯವರ ಮೌಖಿಕ ಹೇಳಿಕೆ ಮೇರೆಗೆ ಖಾತೆಗಳು ಪ್ರತಿವಾದಿಗಳ ಹೆಸರಿಗೆ ವರ್ಗಾವಣೆ ಆಗಿವೆ, ಆ ಸಮಯದಿಂದಲೂ ಅವರು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಮುಂದುವರೆದುಕೊಂಡು ಬಂದು ಇಲ್ಲಿಯವರೆಗೂ ಖಾತೆ ಕಂದಾಯ ಕಟ್ಟುತ್ತಾ ಬಂದಿದ್ದಾರೆ ಎಂದರೆ ಸುಳ್ಳು. ನನ್ನ ತಾಯಿಗೆ ಗೊತ್ತಿಲ್ಲದೇ ಅವರವರೇ ಮಾಡಿಕೊಂಡಿದ್ದಾರೆ.

ನಮ್ಮ ತಾಯಿ ಬದುಕಿದ್ದಾಗಲೇ ಪಂಚಾಯತಿ ನಡೆಸಲಾಗಿತ್ತು ಎಂದು ಹೇಳಿದ್ದು ಆ ಪಂಚಾಯತಿಯಲ್ಲಿ ಭಾಗವಹಿಸಿದ್ದರು ಎನ್ನಲ್ಲಾದ ಪಂಚಾಯತುದಾರರ ಪೈಕಿ ಯಾರನ್ನಾದರೂ ಕರೆಸಿ ವಿಚಾರಣೆ ಮಾಡಬಹುದಾ ಎಂದರೆ ಬಸವಣ್ಣ ಒಬ್ಬರನ್ನು ಹೊರತುಪಡಿಸಿ ಉಳಿದವರು ಮೃತಪಟ್ಟಿದ್ದಾರೆ. ಬಸವಣ್ಣನವರನ್ನು ಕೇಳಿದ್ದೆ ಆದರೆ ಅವರು ಬರುವುದಿಲ್ಲ ಎಂದು ಹೇಳಿದ್ದಾರೆ. ಈಗಾಗಲೇ ಆಗಿದೆ ಎನ್ನಲಾದ ಪಂಚಾಯತಿಯು ನ್ಯಾಯಯುತವಾಗಿರುವುದರಿಂದ ಅದು ಸರಿಯಾಗಿದೆ ಎಂದು ಪಂಚಾಯತುದಾರರ ಪೈಕಿ ಯಾರು ನ್ಯಾಯಾಲಯಕ್ಕೆ ಬಂದು ಹೇಳಿಕೆ ಕೊಡಲು ತಯಾರಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಈಗಾಗಲೇ ವಿಭಾಗ ಪತ್ರ ಮಾಡಿಕೊಂಡಿದ್ದಾರೆ ಎಂದರೆ ಅದನ್ನು ನನ್ನ ತಾಯಿಗೆ ಗೊತ್ತಿಲ್ಲದಂತೆ ಮಾಡಿಕೊಂಡಿದ್ದಾರೆ.

ನಿಪಿ–16ರ ಎಂ.ಆರ್.ಪ್ರಕಾರ ಸದರಿ ಖಾತೆ ಬದಲಾವಣೆಗೆ ಮುಂಚಿತವಾಗಿ ಗ್ರಾಮದಲ್ಲಿ ಪ್ರಚಾರಪಡಿಸಿರುತ್ತಾರೆ, ಆ ಸಂದರ್ಭದಲ್ಲಿ ನಾವ್ಯಾರು ಸದರಿ ಖಾತೆ ಬದಲಾವಣೆಗೆ ಯಾವುದೇ ತಕರಾರು ಸಲ್ಲಿಸಿರಲಿಲ್ಲ ಎಂದರೆ ಆ ವಿಚಾರ ನಮ್ಮ ಗಮನಕ್ಕೆ ಬಂದಿರಲಿಲ್ಲ. ನಿಪಿ–16ರಲ್ಲಿರುವ ಜಮೀನಿನ ಬಗ್ಗೆ ನಮಗಾರಿಗೂ ಗೊತ್ತಿರಲಿಲ್ಲ ಆದ್ದರಿಂದಲೇ ನಾವ್ಯಾರು ತಕರಾರು ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ದಾವಾ 1ನೇ ಐಟಂ ಸರ್ವೆ ನಂ.161/2ರ ಸ್ವತ್ತಿನ ಚಕ್ಕುಬಂದಿಯಲ್ಲಿ ದಕ್ಷಿಣಕ್ಕೆ ಜವರಯ್ಯರವರ ಜಮೀನು, ಪಶ್ಚಿಮಕ್ಕೆ ರಾಚಯ್ಯರವರ ಜಮೀನು, ಪೂರ್ವಕ್ಕೆ ಸೋಮಣ್ಣರವರ ಜಮೀನು, ಉತ್ತರಕ್ಕೆ ಕುಮಾರರವರ ಜಮೀನು ಇರುತ್ತವೆ. ದಾವಾ 3ನೇ ಐಟಂ ಸರ್ವೆ ನಂ.162/4ರ 13 ಗುಂಟೆ ಸ್ವತ್ತಿನ ಚಕ್ಕುಬಂದಿಯಲ್ಲಿ ದಕ್ಷಿಣಕ್ಕೆ ಮಲ್ಲೇಶರವರ ಮನೆ, ಪಶ್ಚಿಮಕ್ಕೆ ಮಹದೇವರವರ ಜಮೀನು, ಪೂರ್ವಕ್ಕೆ ಸೋಮಣ್ಣರವರ ಮನೆ, ಉತ್ತರಕ್ಕೆ ಬಸವಣ್ಣನವರ ಮನೆ ಇರುತ್ತವೆ.

ನನಗೆ ದಾವಾ ಐಟಂ 1 ರಿಂದ 6 ಸ್ವತ್ತುಗಳ ವಿಸ್ತೀರ್ಣಗಳಾಗಲೀ, ಚಕ್ಕುಬಂದಿ ಯಾಗಲೀ ತಿಳಿದಿಲ್ಲ, ಆದಾಗ್ಯೂ ಪ್ರತಿವಾದಿಗಳಿಗೆ ತೊಂದರೆ ಕೊಡುವ ಸಲುವಾಗಿ ಹಾಗೂ ಈಗ ದಾವಾ ಜಮೀನುಗಳ ಬೆಲೆ ಹೆಚ್ಚಾಗಿರುವುದರಿಂದ ಅನ್ಯಾಯದ ಫಾಯಿದೆ ಹೊಂದಲು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆಗೆ ಈಗಾಗಲೇ ವಿಭಾಗ ಆಗಿರುವ ಸತ್ಯಾಂಶ ಗೊತ್ತಿರುವುದರಿಂದ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದರೆ ಅವರು ನ್ಯಾಯಾಲಯಕ್ಕೆ ಬಂದು ನಿಜಾಂಶ ನುಡಿಯುತ್ತಾರೆ ಎಂದು ಅವರನ್ನು ದುರುದ್ದೇಶದಿಂದ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯೇ ಪ್ರತಿವಾದಿಗಳಿಗೆ ವಿಭಾಗ ಮಾಡಿಕೊಟ್ಟಿದ್ದಾರೆ, ಆದ್ದರಿಂದಲೇ ಅವರು ನ್ಯಾಯಾಲಯಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ನನ್ನ ಅಕ್ಕ ಮತ್ತು ತಂಗಿಯ ಮದುವೆಗಳನ್ನು ನನ್ನ ಸೋದರಮಾವಂದಿರಾದ ಪ್ರತಿವಾದಿಗಳೇ ಖರ್ಚು ಮಾಡಿ ನೆರವೇರಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂಗಿ ಗೀತಾರವರ ವಿವಾಹವನ್ನು ಪ್ರತಿವಾದಿಗಳೇ ರೂ.15 ಲಕ್ಷ ಖರ್ಚು ಮಾಡಿ ಮದುವೆ ಮಾಡಿದ್ದಾರೆ ಎಂದರೆ ಸುಳ್ಳು. ನಮ್ಮ ಕುಟುಂಬದಲ್ಲಿ ನಾವ್ಯಾರು ಆರ್ಥಿಕವಾಗಿ

ಸದೃಢರಾಗಿಲ್ಲ ಆದ್ದರಿಂದ ಪ್ರತಿವಾದಿಗಳು ನಮಗೆ ಈಗಾಗಲೇ ಆರ್ಥಿಕವಾಗಿ ಸಾಕಷ್ಟು ಸಹಾಯ ಮಾಡಿದ್ದಾರೆ ಎಂದರೆ ಸರಿಯಲ್ಲ.

ನಿಪಿ-21 ರಲ್ಲಿರುವ ಸ್ವತ್ತಿನ ವಿಸ್ತೀರ್ಣ ನನಗೆ ಗೊತ್ತಿಲ್ಲ. ಮನೆಯಲ್ಲಿ ವಿಭಾಗ ಬೇಡ ಎಂದು ಸದರಿ ಸ್ವತ್ತನ್ನು ಈ ದಾವಾದಲ್ಲಿ ಸೇರ್ಪಡೆ ಮಾಡಿಲ್ಲ. ದಾವಾ ಸ್ವತ್ತಿನಲ್ಲಿ ನಮಗೆ ಯಾವುದೇ ರೀತಿಯ ಹಕ್ಕಾಗಲೀ ಅಥವಾ ವಿಭಾಗ ಪಡೆಯುವ ಅರ್ಹತೆ ಇರುವುದಿಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.